## ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–560 041

**ಸಂಖ್ಯೆ: ಆರ್‌ಜಿಯು/ಇಎಸ್‌ಟಿ/07/2022–23** **ದಿನಾಂಕ: 14/10/2022**

# ಸುತ್ತೋಲೆ

**ಅತ್ಯಂತ ಪ್ರಾಮುಖ್ಯವಾದದ್ದು**

**ವಿಷಯ:** ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2023 ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಂಡಿರುವ ಎಲ್ಲಾ ಆರೋಗ್ಯ ವಿಜ್ಞಾನಗಳ ಕಾಲೇಜುಗಳಲ್ಲಿನ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳ ಮಾಹಿತಿಯನ್ನು ಮತದಾರರ ಪಟ್ಟಿಗೆ ಸೇರಿಸುವ ಕುರಿತು.

**ಉಲ್ಲೇಖ:**
1. ಮುಖ್ಯ ಚುನಾವಣಾಧಿಕಾರಿಯವರ ಪತ್ರ ಸಂಖ್ಯೆ: DPAR/17/SVEEP/2022, ದಿನಾಂಕ: 19.09.2022
2. Meeting held at 07.09.2022 at Chief Electoral office, Bangalore

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿರುವ ಮಾನ್ಯ ಚುನಾವಣಾಧಿಕಾರಿಗಳ ಪತ್ರದಲ್ಲಿ ತಿಳಿಸಿರುವಂತೆ, ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ – 2023 ಅಂಗವಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಎಲ್ಲಾ ಆರೋಗ್ಯ ವಿಜ್ಞಾನಗಳಿಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸದ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಬೇಕಾಗಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ/ಬದಲಾವಣೆ ಮಾಡಬಯಸಿದ್ದಲ್ಲಿ Voter Helpline Application ಡೌನ್‌ಲೋಡ್ ಮಾಡಿಕೊಂಡು ಅಥವಾ www.nvsp.in ವೆಬ್‌ಸೈಟ್‌ಗೆ ಲಾಗಿನ್ ಆಗಿ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಇದರೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ, ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ.

**ವಂದನೆಗಳೊಂದಿಗೆ**

ಕುಲಸಚಿವರು

ಎಂ.ಆರ್. ರವಿಕುಮಾರ್ ಭಾ.ಆ.ಸೇ
ಕುಲಸಚಿವರು
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ 'ಟಿ' ಬ್ಲಾಕ್, ಜಯನಗರ
ಬೆಂಗಳೂರು-560 041.

ಗೆ,
ನಿರ್ದೇಶಕರು/ಡೀನ್/ಪ್ರಾಂಶುಪಾಲರು – ವಿಶ್ವವಿದ್ಯಾಲಯದಲ್ಲಿ ಸಂಯೋಜನೆಗೊಂಡಿರುವ ಎಲ್ಲಾ ಆರೋಗ್ಯ ವಿಜ್ಞಾನಗಳ ಕಾಲೇಜುಗಳು, ರಾ.ಗಾ.ಆ.ವಿ.ವಿ

**ಪ್ರತಿಗಳು ಮಾಹಿತಿಗಾಗಿ : –**

1. ಆಪ್ತಸಹಾಯಕರು – ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) / ಹಣಕಾಸು ಅಧಿಕಾರಿಯವರು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ, ಬೆಂಗಳೂರು.
2. ಕಡತ ಪ್ರತಿ.

# Office of Chief Electoral Officer, Karnataka

Nirvachana Nilaya, Sheshadri Road, Bangalore-560001

No. DPAR/17/SVEEP/2022. Date: 19-09-2022

**To,**

All Vice Chancellors & Registrars.
of Karnataka State.

TO Vasanth shetty Dr/L.S

**Subject**: Video conference about ELCs & Election Reforms.
**Reference**: Meeting held at 07.09.2022 at Chief Electoral Office, Bangalore.

14/10

***

Since 2009, the Chief Electoral Officer, office has been taking up sustained interventions to enhance electoral participation under ECI flagship programme SVEEP "Systematic Voters Education and Electoral Participation" which has yielded dividends in terms of registration and higher voter turnout in the previous Assembly and Lok Sabha Elections 2018 & 2019 respectively. However, participation among the **Youths** remains an area of concern. The **Under Graduate & Post Graduate Universities** play a meaningful role in creating awareness among the urban/rural populace and help in enrolment of new voters. To deliberate upon the newly introduced electoral reforms by the Election Commission of India. A virtual meeting has been scheduled on **26.09.2022**, at **11:30AM** through Google Meet, chaired by Chief Electoral Officer.

You are hereby requested to join the said meeting virtually and participate to ensure "No Voter is Left Behind". **VC LINK-** https://meet.google.com/ibx-venm-uax **VC MEETING CODE- IBX-VENM-UAX.** SLMT/DDPIs/DDPUs are informed to join with their respective District Vice Chancellors.

**Meeting Agenda:**

1. Status of SVEEP programme.
2. The journey of ELC.
3. Annual Calendar of events in ELCs.
4. National Voters Day various competition to be conducted and NVD celebration.
5. Create awareness among all students.
6. Electoral Reforms and VHA application.
7. Articles on activities conducted.

511 14/10/22

**COPY TO,**

All ZPCEOs to inform to attend conference.
All-DDPIs/ DDPUs/ SLMTs.

Imvastrad 21/9/2022
P.S Vastrad. IAS(R)
State SVEEP Nodal Officer,
Karnataka.

• ದಿನಾಂಕ:26.09.2022 ರಂದು ಬೆಳಗ್ಗೆ 11:30 ರಿಂದ ಮಧ್ಯಾಹ್ನ 12:30 ಗಂಟೆಯವರೆಗೆ ಮುಖ್ಯ ಚುನಾವಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು ಹಾಗೂ ಕುಲಸಚಿವರುಗಳೊಂದಿಗೆ ನಡೆದ ವಿಡಿಯೋ ಸಂವಾದದ ಸಭಾ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಮನೋಜ್ ಕುಮಾರ್ ಮೀನಾ, ಮುಖ್ಯ ಚುನಾವಣಾಧಿಕಾರಿಗಳು – ಕರ್ನಾಟಕ.
2. ಶ್ರೀ ವೆಂಕಟೇಶ್ ಕುಮಾರ್.ಆರ್, ಅಪರ ಮುಖ್ಯ ಚುನಾವಣಾಧಿಕಾರಿಗಳು.
3. ಶ್ರೀ ಕರೀಗೌಡ, ಭಾ.ಆ.ಸೇ, ಅಪರ ಮುಖ್ಯ ಚುನಾವಣಾಧಿಕಾರಿಗಳು.
4. ಶ್ರೀ ಶಂಭು ಭಟ್, ಜಂಟಿ ಮುಖ್ಯ ಚುನಾವಣಾಧಿಕಾರಿಗಳು.
5. ಶ್ರೀ ಬಿ.ಎಸ್.ಬಸವರಾಜ್ ಹಿರೇಮಠ್, ಹಿರಿಯ ಸಮಾಲೋಚಕರು (ಮಾನಿಟರಿಂಗ್)
6. ಶ್ರೀ ಪಿ.ಎಸ್.ವಸ್ತ್ರದ್, ರಾಜ್ಯ SVEEP ನೋಡಲ್ ಅಧಿಕಾರಿಗಳು.

ವಿಡಿಯೋ ಸಂವಾದ ಕಾರ್ಯಕ್ರಮಕ್ಕೆ ಹಾಜರಿದ್ದ ಮುಖ್ಯ ಚುನಾವಣಾಧಿಕಾರಿಗಳನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ರಾಜ್ಯ SVEEP ನೋಡಲ್ ಅಧಿಕಾರಿಗಳಾದ ಶ್ರೀ ಪಿ.ಎಸ್.ವಸ್ತ್ರದ್ ರವರು ಸ್ವಾಗತ ಕೋರಿದರು.

ಮುಖ್ಯ ಚುನಾವಣಾಧಿಕಾರಿಗಳಾದ ಶ್ರೀ ಮನೋಜ್ ಕುಮಾರ್ ಮೀನಾ ರವರು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ

- ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಂದರೆ ಪ್ರೌಢ ಶಾಲೆ, ಪದವಿ ಪೂರ್ವ ಕಾಲೇಜು / ತತ್ಸಮಾನ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಐ.ಟಿ.ಐ, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಎಲ್ಲಾ ಪದವಿ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಮತದಾರ ಸಾಕ್ಷರತಾ ಸಂಘಗಳನ್ನು ಸ್ಥಾಪಿಸಿ ಅದರ ಕಾರ್ಯ ಚಟುವಟಿಕೆಗಳನ್ನು ಆಯೋಜಿಸಲು ಸೂಚಿಸಿದರು.
- ಮತದಾರ ಸಾಕ್ಷರತಾ ಸಂಘಗಳ ಪ್ರಾಮುಖ್ಯತೆ ಮತ್ತು ಕಾರ್ಯ ಪ್ರವೃತ್ತಿಯನ್ನು ವಿವರಿಸುತ್ತಾ, ಮತದಾರ ಸಾಕ್ಷರತಾ ಸಂಘಗಳ (ELCs) ಮುಖಾಂತರ ಮತದಾರರ ಸಾಕ್ಷರತೆ ಹಾಗೂ ಮತದಾರರ ಜಾಗೃತಿ ಕಾರ್ಯವನ್ನು ನಡೆಸಿ, 18 ವರ್ಷ ತುಂಬಿದ ಎಲ್ಲಾ ಅರ್ಹ ಮತದಾರರು ಮತದಾರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸುವಂತೆ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು.
- ಈಗಾಗಲೆ ನೋಂದಾಯಿಸಿರುವ ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿ, ತಮ್ಮ ಕುಟುಂಬದವರು ಮತ್ತು ನೆರೆಹೊರೆಯವರ ಮತದಾರ ಗುರುತಿನ ಚೀಟಿಯನ್ನು ಆಧಾರ್‌ನೊಂದಿಗೆ ಜೋಡಣೆ ಮಾಡಲು ತಿಳಿಸುವಂತೆ ಸೂಚಿಸಿದರು.
- ರಾಜ್ಯ SVEEP ನೋಡಲ್ ಅಧಿಕಾರಿಗಳು ಮಾತನಾಡುತ್ತಾ SVEEP ಅಂದರೆ Systematic Voter Education and Electoral Paricipation (ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ

ಭಾಗವಹಿಸುವಿಕೆ) ಅಧೀನದಲ್ಲಿ ಮುಖ್ಯವಾಗಿ ಮತದಾರ ಸಾಕ್ಷರತಾ ಸಂಘ (ELCs), ಚುನಾವಣಾ ಜಾಗೃತಿ ಸಂಘ (CJCs) ಹಾಗೂ ಮತದಾರ ಜಾಗೃತಿ ವೇದಿಕೆ (VAF) ಎಂಬ 03 ವಿವಿಧ ಸಂಘಗಳು ಬರುತ್ತವೆ. ಅದರಲ್ಲಿ ವಿಶೇಷವಾಗಿ ಮತದಾರ ಸಾಕ್ಷರತಾ ಸಂಘಗಳು ಎಲ್ಲಾ ಪ್ರೌಢ ಶಾಲೆಗಳು, ಪದವಿ ಪೂರ್ವ / ತತ್ಸಮಾನ, ಎಲ್ಲಾ ಪದವಿ, ಸ್ನಾತಕೋತ್ತರ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಮತದಾರ ಸಾಕ್ಷರತಾ ಸಂಘಗಳನ್ನು ಅನುಷ್ಠಾನಗೊಳಿಸುವಂತೆ ತಿಳಿಸಿದರು ಹಾಗೂ, ಸಂಸ್ಥೆಯ ಮುಖ್ಯಸ್ಥರು / ಪ್ರಾಂಶುಪಾಲರು ಅದರ ಅಧ್ಯಕ್ಷರಾಗಿರುತ್ತಾರೆಂದು ವಿವರಿಸಿದರು. ರಾಜ್ಯಶಾಸ್ತ್ರ ಪ್ರಾಧ್ಯಾಪಕರು ಅಥವಾ ಇಚ್ಛಿಸುವ ಇತರೆ ಯಾವುದೇ ವಿಷಯದ ಪ್ರಾಧ್ಯಾಪಕರು ಪ್ರಸ್ತುತ ಮತದಾರ ಸಾಕ್ಷರತಾ ಸಂಘದ ಸಂಚಾಲಕರಾಗಿರುತ್ತಾರೆ ಮತ್ತು ಸಂಸ್ಥೆಯಲ್ಲಿ ಒಬ್ಬ ವಿದ್ಯಾರ್ಥಿ ಹಾಗೂ ಒಬ್ಬ ವಿದ್ಯಾರ್ಥಿನಿ ಆ ಸಂಸ್ಥೆಯ ಕ್ಯಾಂಪಸ್ ರಾಯಭಾರಿಗಳಾಗಿರುತ್ತಾರೆ ಹಾಗೂ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ಎಲ್ಲಾ ವಿದ್ಯಾರ್ಥಿಗಳು ಆ ಮತದಾರ ಸಾಕ್ಷರತಾ ಸಂಘದ ಸದಸ್ಯರಾಗಿರುತ್ತಾರೆ ಎಂದು ತಿಳಿಸಿದರು.

- ಈಗಾಗಲೆ ನಮ್ಮ ರಾಜ್ಯದಲ್ಲಿ ಸುಮಾರು 30 ಸಾವಿರ ಮತದಾರ ಸಾಕ್ಷರತಾ ಸಂಘಗಳು (ELCs) ಕೆಲಸ ಮಾಡುತ್ತಿವೆ. ಅದರಲ್ಲಿ ಪದವಿ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಹಾಗೂ ವಿಶ್ವವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ.
- ವಿದ್ಯಾಭ್ಯಾಸದಿಂದ ಹೊರಗುಳಿದಿರುವ ವ್ಯಕ್ತಿಗಳನ್ನು ಸೇರಿಸಿಕೊಂಡು ಚುನಾವಣಾ ಜಾಗೃತಿ ವೇದಿಕೆಗಳನ್ನು (CJCs) ಪ್ರತಿ ಮತಗಟ್ಟೆವಾರು ಸ್ಥಾಪಿಸಿದಲ್ಲಿ ಅವರಿಗೂ ಮತದಾನದ ಅರಿವು ಮೂಡಿಸುವ ಕೆಲಸ ವಾಗುತ್ತದೆ ಎಂದರು.
- ಮತದಾರ ಜಾಗೃತಿ ವೇದಿಕೆಗಳನ್ನು ಎಲ್ಲಾ ಕಛೇರಿಗಳಲ್ಲಿ ಸ್ಥಾಪಿಸುವಂತೆ, ಸದರಿ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಇದರ ಸದಸ್ಯರಾಗಿತ್ತಾರೆ ಹಾಗೂ ಕಛೇರಿಯ ಮುಖ್ಯಸ್ಥರು ಅದರ ಅಧ್ಯಕ್ಷರಾಗಿರುತ್ತಾರೆಂದು ವಿವರಿಸಿದರು. ಮತದಾರ ಜಾಗೃತಿ ವೇದಿಕೆಗಳನ್ನು ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಎಲ್ಲಾ ಖಾಸಗಿ ಕಛೇರಿಗಳಲ್ಲಿ ಸ್ಥಾಪಿಸಿ ಅದರ ಮುಖಾಂತರ ಮತದಾರರ ಪರಿಶೀಲನೆ, ಮತದಾರ ನೋಂದಣಿ ಅಥವಾ ಮತದಾರ ಪಟ್ಟಿಯಲ್ಲಿನ ತಿದ್ದುಪಡಿಗಳನ್ನು ಮಾಡಿಸಬೇಕು ಎಂದು ತಿಳಿಸಿದರು.
- ಮೇಲಿನ 03 ಸಂಘಗಳಲ್ಲಿ ಮುಖ್ಯವಾಗಿ ಮತದಾರರಿಗೆ ಮತದಾರ ಸಾಕ್ಷರತೆ, ಮತದಾರ ಜಾಗೃತಿ, ಮತದಾರ ನೋಂದಣಿ ಹಾಗೂ ಮತದಾರ ಪರಿಶೀಲನೆ ಕೆಲಸಗಳನ್ನು ನಡೆಸಬೇಕು.
- ಈ ಮೇಲಿನ ಎಲ್ಲಾ ವಿಷಯಗಳನ್ನು ವೋಟರ್ ಹೆಲ್ಪ್‌ಲೈನ್ ಆಪ್ ಮುಖಾಂತರ ನಡೆಸಬಹುದು.
- ವೋಟರ್ ಹೆಲ್ಪ್‌ಲೈನ್ ಆಪ್‌ನ್ನು ಸ್ಮಾರ್ಟ್ ಮೊಬೈಲ್‌ನ ಗೋಗಲ್ ಪ್ಲೇ ಸ್ಟೋರ್‌ನಿಂದ ಅಥವಾ ಆಪಲ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಅದರಲ್ಲಿ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯು ಲಭ್ಯವಿದೆ. ನಿಮ್ಮ ಕ್ಷೇತ್ರದ ಅಭ್ಯರ್ಥಿಯ ವಿವರಗಳು, ಅವರ ವಿದ್ಯಾರ್ಹತೆ, ಅವರ ಮೇಲಿನ ದೂರುಗಳು, ಅವರ ಆಸ್ತಿ, ಅವರ ಸಾಧನೆಗಳನ್ನು ಒಳಗೊಂಡ ಮಾಹಿತಿ ಹಾಗೂ ಇ.ವಿ.ಎಂ (ವಿದ್ಯುನ್ಮಾನ ಮತ ಯಂತ್ರ) / ವಿ.ವಿ.ಪ್ಯಾಟ್‌ಗಳ ಬಗ್ಗೆ ಮಾಹಿತಿ ಹಾಗು ಮತದಾರ ನೋಂದಣಿಗೆ ಸಂಬಂಧಿಸಿದ ಎಲ್ಲಾ ನಮೂನೆಗಳಾದ

ನಮೂನೆ 6 – ನೋಂದಾಯಿಸಲು

ನಮೂನೆ 7 – ಹೆಸರು ತೆಗೆಯುವಿಕೆ

ನಮೂನೆ 8 – ಎಲ್ಲಾ ರೀತಿಯ ತಿದ್ದುಪಡಿಗಾಗಿ.

ಹಾಗು ಇತರೆ ನಮೂನೆಗಳನ್ನು ಪರಿಶೀಲಿಸಿ ಆನ್‌ಲೈನ್ ಮುಖಾಂತರ ಭರ್ತಿ ಮಾಡಬಹುದೆಂದು ತಿಳಿಸಿದರು.

- ಕಳೆದ 2018ರ ವಿಧಾನಸಭಾ ಮತ್ತು 2019ರ ಲೋಕಸಭಾ ಚುನಾವಣೆಗಳಲ್ಲಿ ಮತದಾರ ಸಾಕ್ಷರತಾ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದರಿಂದ ಮತದಾರ ಭಾಗವಹಿಸುವಿಕೆ ಹೆಚ್ಚಳವಾಗಲು ಕಾರಣವಾಗಿದೆ.

- ಚುನಾವಣಾ ಆಯೋಗವು ಧ್ಯೇಯವಾಕ್ಯ "ಮತದಾರರನ್ನು ಒಳಗೊಳ್ಳುವ, ಸುಗಮ ಮತ್ತು ಭಾಗವಹಿಸುವಂತೆ" ಮಾಡುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು SLMT ಗಳಿಗೆ ತರಬೇತಿ ನೀಡಿ ಅವರಿಂದ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳು (DLMT), ತಾಲ್ಲೂಕು ಮಟ್ಟದ ಸಂಪನ್ಮೂಲ ವ್ಯಕ್ತಿಗಳು (TLMT) ಹಾಗೂ ಬೂತ್ ಮಟ್ಟದ ಸಂಪನ್ಮೂಲ ವ್ಯಕ್ತಿಗಳು (BLMT) ಹೀಗೆ ಕ್ಯಾಸ್ಕೇಡ್ ಮೋಡ್‌ನಲ್ಲಿ ತರಬೇತಿ ನೀಡಲಾಗುವುದು.

- ಪ್ರತಿ ಕಾಲೇಜು / ವಿಶ್ವವಿದ್ಯಾಲಯದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ಮತದಾರ ಸಾಕ್ಷರತಾ ಸಂಘಕ್ಕೆ ನೇಮಿಸಿ ಅವರ ಹೆಸರು, ಮೊಬೈಲ್ ಸಂಖ್ಯೆ ಹಾಗು ಇ ಮೇಲ್ ವಿಳಾಸವನ್ನು consveep@gmail.com ಗೆ ಮೇಲ್ ಮಾಡಲು ಸೂಚಿಸಿದರು.

- ವಿಡಿಯೋ ಸಂವಾದದಲ್ಲಿ ಹಾಜರಿದ್ದ ಉಪಕುಲಪತಿಗಳು ಹಾಗೂ ಕುಲಸಚಿವರುಗಳು ಈ ಕೆಳಕಂಡ ವಿಷಯಗಳನ್ನು ತಿಳಿಸಿದರು.

  1. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊಫೆಸರ್ ಡಾ॥ ಸಿ.ಬಸವರಾಜು ರವರು ಮಾತನಾಡಿ ಮುಖ್ಯ ಚುನಾವಣಾಧಿಕಾರಿಗಳು ಸೂಚಿಸಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆದರೆ ಮತದಾರರ ಗುರುತಿನ ಚೀಟಿಯನ್ನು ವಿದ್ಯಾರ್ಥಿಗಳು ನಮೂದಿಸಿರುವ ವಿಳಾಸಕ್ಕೆ ದಯವಿಟ್ಟು ಕಳುಹಿಸಿಕೊಡಿ ಎಂದು ಕೋರಿದರು. ಇದಕ್ಕೆ ಗುರುತಿನ ಚೀಟಿಯನ್ನು ಅಂಚೆ ಮೂಲಕ ತಲುಪಿಸಲಾಗುವುದೆಂದು ಮುಖ್ಯ ಚುನಾವಣಾಧಿಕಾರಿಗಳು ತಿಳಿಸಿದರು.
  2. ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊಫೆಸರ್ ಆರ್.ಶಿವಪ್ಪ ರವರು ಮಾತನಾಡಿ ಮುಖ್ಯ ಚುನಾವಣಾಧಿಕಾರಿಗಳು ಹಾಗೂ ರಾಜ್ಯ SVEEP ನೋಡಲ್ ಅಧಿಕಾರಿಗಳು ತಿಳಿಸಿದಂತೆ ಎಲ್ಲಾ ಕಾಲೇಜುಗಳಿಗೆ ಸೂಚನೆ ನೀಡಿ, ಎಲ್ಲಾ 18+ ಆದ ವಿದ್ಯಾರ್ಥಿಗಳ ಹೆಸರನ್ನು ಮತದಾರರ ಪಟ್ಟಿಗೆ ನೋಂದಾಯಿಸಲು ಹಾಗೂ ನಮೂನೆ 6(ಬಿ) ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.
  3. ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಬಿ.ಸಿ.ಪಾಟೀಲ್ ಮಾತನಾಡಿ ಮತದಾರ ನೋಂದಣಿ ಹಾಗು ಮತದಾರ ಪರಿಶೀಲನೆಗೆ ಸಂಬಂಧಿಸಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

4. BLDE ವಿಶ್ವವಿದ್ಯಾಲಯದ ಕುಲಸಚಿವರಾದ ಡಾ॥ ಆರ್.ವಿ.ಕುಲಕರ್ಣಿ ರವರು ಮಾತನಾಡಿ ನಮ್ಮ ವಿಶ್ವವಿದ್ಯಾಲಯದಲ್ಲಿ ದೇಶದ ಬೇರೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವರನ್ನು ಯಾವ ರೀತಿ ನೋಂದಣಿ ಮಾಡಿಸಬೇಕೆಂದು ಕೇಳಿದರು. ಅದಕ್ಕೆ ಮುಖ್ಯ ಚುನಾವನಾಧಿಕಾರಿಗಳು ಉತ್ತರಿಸುತ್ತಾ ವೋಟರ್ ಹೆಲ್ಪ್‌ಲೈನ್ ಆಪ್ ನಲ್ಲಿ ಅವರಿಗೆ ಆಯ್ಕೆಯನ್ನು ಕಲ್ಪಿಸಲಾಗಿದೆ. ತಮಗೆ ಇಷ್ಟವಾದ ರಾಜ್ಯದಲ್ಲಿ ತಮ್ಮ ನೋಂದಣಿಯನ್ನು ಮಾಡಿಸಬಹುದು ಎಂದು ತಿಳಿಸಿದರು.

5. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳು ಮಾತನಾಡಿ, ನಮ್ಮದು ತುಂಬಾ ದೊಡ್ಡ ವಿಶ್ವವಿದ್ಯಾಲಯವಾಗಿರುವುದರಿಂದ ಜಿಲ್ಲಾ ಆಡಳಿತದಿಂದ ಒಬ್ಬರನ್ನು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮಾಡಿ ಸದರಿ ಕೆಲಸಗಳನ್ನು ನಿರ್ವಹಿಸಲು ಸೂಚಿಸುವಂತೆ ಮನವಿ ಮಾಡಿದರು.

ಮುಖ್ಯ ಚುನಾವಣಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಯನ್ನು ಸಲ್ಲಿಸುತ್ತಾ ವಿಡಿಯೋ ಸಂವಾದ ಸಭೆಯನ್ನು ಮುಕ್ತಾಯಗೊಳಿಸಿದರು.

(ಮನೋಜ್ ಕುಮಾರ್ ಮೀನಾ, ಭಾ.ಆ.ಸೇ)
ಮುಖ್ಯ ಚುನಾವಣಾಧಿಕಾರಿಗಳು
ಸಿ.ಆ.ಸು.ಇ(ಚುನಾವಣೆಗಳ)

ಲಗತ್ತು:-

**ಅನುಬಂಧ 1, 2, 3.**

FORMAT-1

E-Roll Format-I (To be filled by Head of the Institution)

District--

Taluk--

Name & Address of the College/PG center/University --

| Sl.No | Name of the Student | Student Enrolled as Voters Y/N | Student Pending for enrollment Y/N | Student attending 18Yrs of Age as on 1st Jan Y/N | whether From 6 collected and digitized | Remarks If, not specify Resason. |
|---|---|---|---|---|---|---|
| [1] | [2] | [3] | [4] | [5] | [6] | [7] |
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |
| 7 | | | | | | |
| 8 | | | | | | |
| 9 | | | | | | |
| 10 | | | | | | |
| 11 | | | | | | |
| 12 | | | | | | |
| 13 | | | | | | |
| 14 | | | | | | |
| 15 | | | | | | |
| 16 | | | | | | |
| 17 | | | | | | |
| 18 | | | | | | |
| 19 | | | | | | |
| 20 | | | | | | |
| 21 | | | | | | |
| 22 | | | | | | |
| 23 | | | | | | |
| 24 | | | | | | |
| 25 | | | | | | |
| 26 | | | | | | |
| 27 | | | | | | |
| 28 | | | | | | |
| 29 | | | | | | |
| 30 | | | | | | |

As it is related to the Electoral Process I am aware of the relevant Electoral Laws and provisions of Election Commission of India. I have verified the above information and certify that above information is correct.

Name, Signature, Seal of Head of the Institution

FORMAT-2

| | | Nodal Officer | | | Campus Ambassador | | |
|---|---|---|---|---|---|---|---|
| Sl. no | Name of the College/University | Name | Mobile No | Email id | Name | Mobile NO | Email Id |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| 7 | | | | | | | |
| 8 | | | | | | | |
| 9 | | | | | | | |
| 10 | | | | | | | |
| 11 | | | | | | | |
| 12 | | | | | | | |
| 13 | | | | | | | |
| 14 | | | | | | | |
| 15 | | | | | | | |
| 16 | | | | | | | |
| 17 | | | | | | | |
| 18 | | | | | | | |
| 19 | | | | | | | |
| 20 | | | | | | | |
| 21 | | | | | | | |
| 22 | | | | | | | |
| 23 | | | | | | | |
| 24 | | | | | | | |
| 25 | | | | | | | |
| 26 | | | | | | | |
| 27 | | | | | | | |
| 28 | | | | | | | |
| 29 | | | | | | | |
| 30 | | | | | | | |

FORMAT-3

| Sl.no | Name of the College/University/Office | Name of the Head of Inst/Vice Chancellor | Name of the Member Secretary for VAF | Mobile No. & Mail Id | Total No.of People working at the Inst/Uni | How many people enrolled as Voters | How many are not enrolled | Action taken for enrolling the left out. |
|---|---|---|---|---|---|---|---|---|
| 1 | | | | | | | | |
| 2 | | | | | | | | |
| 3 | | | | | | | | |
| 4 | | | | | | | | |
| 5 | | | | | | | | |
| 6 | | | | | | | | |
| 7 | | | | | | | | |
| 8 | | | | | | | | |
| 9 | | | | | | | | |
| 10 | | | | | | | | |
| 11 | | | | | | | | |
| 12 | | | | | | | | |
| 13 | | | | | | | | |
| 14 | | | | | | | | |
| 15 | | | | | | | | |
| 16 | | | | | | | | |
| 17 | | | | | | | | |
| 18 | | | | | | | | |
| 19 | | | | | | | | |
| 20 | | | | | | | | |
| 21 | | | | | | | | |
| 22 | | | | | | | | |
| 23 | | | | | | | | |
| 24 | | | | | | | | |
| 25 | | | | | | | | |
| 26 | | | | | | | | |
| 27 | | | | | | | | |
| 28 | | | | | | | | |
| 29 | | | | | | | | |
| 30 | | | | | | | | |

ಭಾರತ ಚುನಾವಣಾ ಆಯೋಗ
ಮುಖ್ಯ ಚುನಾವಣಾಧಿಕಾರಿ
ಕರ್ನಾಟಕ

ELECTION COMMISSION OF INDIA
CHIEF ELECTORAL OFFICER
KARNATAKA




# ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2023

## ದಿನಾಂಕ: 04-08-2022 ರಿಂದ 24-10-2022 ರವರೆಗೆ

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ/ಬದಲಾವಣೆ ಮಾಡಬಯಸಿದ್ದಲ್ಲಿ Voter Helpline Application ಡೌನ್ ಲೋಡ್ ಮಾಡಿಕೊಂಡು ಅಥವಾ www.nvsp.in ವೆಬ್ ಸೈಟ್ ಗೆ ಲಾಗಿನ್ ಆಗಿ ಆನ್ ಲೈನ್ ಮೂಲಕ ಸಲ್ಲಿಸಬಹುದು ಅಥವಾ ಸಂಬಂಧಿಸಿದ ಬೂತ್ ಮಟ್ಟದ ಅಧಿಕಾರಿ ಅಥವಾ ಮತದಾರರ ನೋಂದಣಾಧಿಕಾರಿ ಕಛೇರಿಗೆ ಭೇಟಿ ನೀಡಿ ಸಂಪರ್ಕಿಸಬಹುದು.

**ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ವರ್ಷಕ್ಕೆ ಒಂದಲ್ಲ**
**ಈಗ ನಾಲ್ಕು (4) ಅರ್ಹತಾ ದಿನಾಂಕಗಳು**

ಜನವರಿ 1 | ಏಪ್ರಿಲ್ 1 | ಜುಲೈ 1 | ಅಕ್ಟೋಬರ್ 1

**: ನಿಮಗೆ ಅವಶ್ಯವಿರುವ ಈ ಕೆಳಕಂಡ ಅರ್ಜಿ ನಮೂನೆಗಳನ್ನು ಆಯ್ಕೆ ಮಾಡಿಕೊಳ್ಳಿ :**

**ನಮೂನೆ -(6)**
ಹೊಸ ಮತದಾರರ ನೋಂದಣಿಗಾಗಿ

**ನಮೂನೆ -(7)**
ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದು ಹಾಕಲು

**ನಮೂನೆ -6(ಬಿ)**
ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಯೊಂದಿಗೆ ಲಿಂಕ್ ಮಾಡಲು

**ನಮೂನೆ -(8)**
ವಿಳಾಸ ಬದಲಾವಣೆ, ಬದಲಿ ಮತದಾರರ ಗುರುತಿನ ಚೀಟಿ ನೀಡುವಿಕೆಗಾಗಿ, ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಡಿಗಳಿಗಾಗಿ, ಅಂಗವಿಕಲ ವ್ಯಕ್ತಿಯನ್ನು ಮತದಾರರ ಪಟ್ಟಿಯಲ್ಲಿ ಗುರುತಿಸಲು.

**: ವಿಶೇಷ ನೋಂದಣಿ ಅಭಿಯಾನದ ದಿನಾಂಕಗಳು :**

| | | | |
|---|---|---|---|
| 12-11-2022 | 20-11-2022 | 03-12-2022 | 04-12-2022 |
| (ಶನಿವಾರ) | (ಭಾನುವಾರ) | (ಶನಿವಾರ) | (ಭಾನುವಾರ) |

**ಸಮಯ : ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ**

ಪ್ರಕಟಣೆ: ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ

ಚುನಾವಣೆಗಳನ್ನು ಒಳಗೊಳ್ಳುವ, ಸುಗಮ ಮತ್ತು ಭಾಗವಹಿಸುವಂತೆ ಮಾಡುವುದು
Making Elections Inclusive, Accessible and Participative

Register online and check your details
https://voterportal.eci.gov.in

ಡೌನ್‌ಲೋಡ್ / Download
Voter Helpline App

#AllToPoll
ceokarnataka
ceo.karnataka.gov.in